ಲಾಗುವುದು. ಸೀಮೆ ಎಣ್ಣೆಯನ್ನು ರಾಜ್ಯಕ್ಕೆ ಕೇಂದ್ರ ಸರ್ಕಾರವು ಬಿಡುಗಡೆ ಮಾಡುತ್ತಿದ್ದು ಅದಿಗೆ ಮತ್ತು ಬೆಳಕಿನ ವ್ಯವಸ್ಥೆಗಾಗಿ ಬಿಡುಗಡೆ ಮಾಡಬೇಕೆಂದು ಕೇಂದ್ರ ಸರ್ಕಾರದ ನಿರ್ದೇಶನವಿದೆ. ಆದ್ದರಿಂದ ಕೈಗಾರಿಕೆ ಮತ್ತು ಇತರ ಉದ್ದೇಶಗಳಿಗೆ ಬಳಸುವ ಸೀಮೆ ಎಣ್ಣೆಯನ್ನು ಕೈಗಾರಿಕಾ ಬೆಲೆಯಲ್ಲಿ ವಿತರಿಸಲಾಗುತ್ತಿದೆ. ಜನವರಿ ೧೯೬೭ ರಿಂದ ಈ ರೀತಿಯ ಎರಡು ಬೆಲೆಗಳನ್ನು ಜಾರಿಗೆ ತರಲಾಗಿದೆ. ಪಂಪ್‌ಸೆಟ್ಟುಗಳಿಗೆ ಬಳಸುವ ಸೀಮೆ ಎಣ್ಣೆಯನ್ನು ಕೈಗಾರಿಕಾ ಸೀಮೆ ಎಣ್ಣೆಯ ಬೆಲೆಯಲ್ಲಿಯೇ ಮಾರಲಾಗುತ್ತಿದೆ. ಕೇಂದ್ರ ಸರ್ಕಾರದ ಅನುಮತಿ ದೊರೆತರೆ ಮನೆ ಬಳಕೆಯ ದರದಲ್ಲೇ ಪಂಪ್ ಸೆಟ್ಟುಗಳಿಗೂ ಸೀಮೆ ಎಣ್ಣೆ ಒದಗಿಸಬಹುದು.

೩. ಉಡುಪಿ ತಾಲ್ಲೂಕು ಬೈಲೂರು ಮಂಡಲ ಪಂಚಾಯತಿಗೆ ಕಂಡಿಯುವ ನೀರಿನ ಯೋಜನೆ ಮಂಜೂರಾತಿಯಲ್ಲಿ ವಿಳಂಬ

ಶ್ರೀಮತಿ ಮನೋರಮಾ ಮಧ್ವರಾಜ್ (ಉಡುಪಿ).—ಮಾನ್ಯ ಅಧ್ಯಕ್ಷರೇ, ಉಡುಪಿ ತಾಲ್ಲೂಕಿನ ಬೈಲೂರು ಮಂಡಲ ಪಂಚಾಯತ್‌ಗೆ ೧೯೭೬ ರಿಂದ ಉಡುಪಿ ಅರ್ಬನ್ ವಾಟರ್ ಸಪ್ಲೈ ಸ್ಕೀಂ ಮೂಲಕ ನೀರು ಸರಬರಾಜು ಆಗುತ್ತಿದೆ. ಉಡುಪಿ ನಗರಸಭೆಯ ಹೊರವಲಯದಲ್ಲಿರುವ ಬೈಲೂರು ಮಂಡಲದಲ್ಲಿ ಕಳೆದ ೧೦-೧೨ ವರ್ಷಗಳಲ್ಲಿ ಜನಸಂಖ್ಯೆ ಶೇಕಡಾ ೩೫ ರಷ್ಟು ಏರಿದೆ. ಈಗಿರುವ ನೀರು ಪೂರೈಕೆ ಅಪೂರ್ಣ ಮತ್ತು ಅಸಮರ್ಪಕ ಆದ ಪ್ರಯುಕ್ತ ಬೈಲೂರು ಮಂಡಲ ಪಂಚಾಯಿತಿಯು ೭೬ ಬೆಡದ ಬೆಟ್ಟು ಗ್ರಾಮಕ್ಕೆ ನಳ ನೀರು ಒದಗಿಸಲು ರೂ. ೯,೨೫,೦೦೦ ಗೆ ಲೈನ್ ಎಸ್ಟಿಮೇಟ್‌ನ್ನು ಉಡುಪಿಯ ದಕ್ಷಿಣ ಕನ್ನಡ ಜಿಲ್ಲಾ ಪರಿಷತ್ ಇಂಜಿನಿಯರಿಂಗ್ ವಿಭಾಗದವರು ತಯಾರಿಸಿ ಸರ್ಕಾರಕ್ಕೆ ಮಂಜೂರಾತಿಗೆ ಕಳುಹಿಸಿರುತ್ತಾರೆ. ಆದರೆ ಅದಕ್ಕೆ ಇನ್ನೂ ಮಂಜೂರಾತಿ ದೊರೆತಿಲ್ಲ. ಈ ವಿಳಂಬದಿಂದಾಗಿ ನೀರಲ್ಲದೆ ಬಾಯಾರಿದ ಬೈಲೂರಿನ ಜನ ಬಳಲಿ ಬಸವಳಿಯುವಂತಾಗಿದೆ. ಎಲ್ಲ ಕಡೆಗೂ ನೀರು ಕೊಟ್ಟಿದ್ದೇನೆ ಎಂದು ಸಾರುತ್ತಿರುವ ನೀರು ಮಂತ್ರಿಗಳು ಇಲ್ಲಿಗೇಕೆ ತಾರತಮ್ಯ ಮಾಡಿದ್ದಾರೆ ? ಯಾವಾಗ ಮಂಜೂರಾತಿ ದೊರೆತೀತು ಎಂದು ಕೇಳ ಬಯಸುತ್ತೇನೆ.

ಶ್ರೀ ಎಂ. ರಘುಪತಿ (ವಿಮಾನುಗಾರಿಕೆ, ಬಂದರುಗಳು ಮತ್ತು ಒಳನಾಡು ಜಲಸಾರಿಗೆ ಖಾತೆ ಸಚಿವರು).—ಮಾನ್ಯ ಅಧ್ಯಕ್ಷರೇ, ಮಾನ್ಯ ಗ್ರಾಮಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆರೋಗ್ಯ ಸರಿಯಾಗಿಲ್ಲದಿರುವುದರಿಂದ ಮಾನ್ಯ ಸದಸ್ಯರಿಗೆ ನಾನೆ ಉತ್ತರವನ್ನು ಒದಗಿಸಿಕೊಡುತ್ತೇನೆ.

೪. ಮಂಗಳೂರು–ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿರುವ ಪಾಣೆ ಮಂಗಳೂರು ಸೇತುವೆಯನ್ನು ಹೊಸದಾಗಿ ನಿರ್ಮಿಸುವುದರ ಬಗ್ಗೆ

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಮಂಗಳೂರು).—ಮಾನ್ಯ ಅಧ್ಯಕ್ಷರೇ, ಮಂಗಳೂರು–ಬೆಂಗಳೂರು ರಾಷ್ಟ್ರೀಯ ಹೆದ್ದಾರಿ ನಂ. ೪೮ ರಲ್ಲಿರುವ ಪಾಣೆ ಮಂಗಳೂರು ಸೇತುವೆ ತೀರಾ ಹಳೆಯದು ಮತ್ತು ಅಗಲ ಕಿರಿದಾದುದು. ಆದಷ್ಟು ಬೇಗ ಹೊಸ ಸೇತುವೆ ಆಗಬೇಕು. ಅಷ್ಟರತನಕ ಇಕ್ಕಟ್ಟಾದ ಸೇತುವೆಯಲ್ಲಿ ಕಿಕ್ಕಿರಿಯುವ ವಾಹನ ಸಂಚಾರವನ್ನು ನಿಯಂತ್ರಿಸಬೇಕು. ಅದಕ್ಕಾಗಿ ಸೇತುವೆಯ ಎರಡು ಬದಿಗಳಲ್ಲಿ ಸಂಚಾರಿ ಆರಕ್ಷಕ ಸಿಬ್ಬಂದಿಗಳನ್ನು ನಿಯೋಜಿಸಬೇಕು. ವಾಹನ ಚಾಲಕರ ಮೇಲಾಟದಿಂದ ಅನೇಕ ವೇಳೆ ಆಗುವ "ವಾಹನ ಸ್ಥಗಿತ" (ಟ್ರಾಫಿಕ್ ಜಾಮ್) ತಪ್ಪಿಸಬೇಕು ಎಂದು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—(ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ನೀಡಿದ ಉತ್ತರದ ಕಾಪಿಯನ್ನು ಲಗತ್ತಿಸಲಾಗಿದೆ)

ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ಬಳಿ ನೇತ್ರಾವತಿ ನದಿಯ ಮೇಲೆ ರಾಷ್ಟ್ರೀಯ ಹೆದ್ದಾರಿಯಲ್ಲಿರ ಮೇಲೆ ಒಂದು ಹಳೆಯ ಸೇತುವೆ ಇದ್ದು, ಅದರ ಅಗಲ ತೀರಾ ಕಡಿಮೆ ಇದೆ. ಆದರಿಂದಾಗಿ ಆಗಾಗ್ಗೆ ಸಂಚಾರ ಸ್ಥಗಿತಗೊಳ್ಳುತ್ತಿದೆ. ಈ ಹೆದ್ದಾರಿಯಲ್ಲಿ ಸಂಚಾರ ದಿನೇ ದಿನೇ ಜಾಸ್ತಿಯಾಗುತ್ತಿದ್ದು ಇನ್ನೊಂದು ಸೇತುವೆಯನ್ನು ನಿರ್ಮಿಸುವ ಅಗತ್ಯ ಕಂಡು ಬಂದಿದ್ದು, ರಾಷ್ಟ್ರೀಯ ಹೆದ್ದಾರಿ ಎಕ್ಸಿಕ್ಯುಟೀವ್ ಇಂಜಿನಿಯರ್‌ರವರು ಹೊಸ ಸೇತುವೆಯನ್ನು ಕಟ್ಟಲು ರೂ. ೪ ಕೋಟಿ ವೆಚ್ಚದ